ಅ) (1) ಶೀಪ್ರಲಿಪಿಗಾರರು - 415
ಬೆರಳಚ್ಚುಗಾರರು - 1725

(2) ಶೀಪ್ರಲಿಪಿಗಾರರು - 6
ಬೆರಳಚ್ಚುಗಾರರು - 154

(3) ಶೀಪ್ರಲಿಪಿಗಾರರು - 77
ಬೆರಳಚ್ಚುಗಾರರು - 234

(4) ಶೀಪ್ರಲಿಪಿಗಾರರು - 74
ಬೆರಳಚ್ಚುಗಾರರು - 107

ಇ) ಹೌದು

ಈ) ಪ್ರಸ್ತುತದಲ್ಲಿರುವ ಗರಷ್ಠ ವಯೋಮಿತಿ ಈ ರೀತಿ ಇದೆ.

ಪರಿಶಿಷ್ಠ ಜಾತಿ:ಪರಿಶಿಷ್ಠ ಪಂಗಡ:ಪ್ರವರ್ಗ - 38 ವರ್ಷ

ಇತರ ಹಿಂದುಳಿದ ವರ್ಗಗಳಿಗೆ - 36 ವರ್ಷ

ಸಾಮಾನ್ಯ ಅರ್ಹತೆ - 33 ವರ್ಷ

ಇದನ್ನು ಇನ್ನೂ ಹೆಚ್ಚಿಸುವ ಪ್ರಸ್ತಾವನೆ ಇಲ್ಲ.

ಉ) ಈ ರೀತಿ ಮಾಡಲು ನಿಯಮಗಳಲ್ಲಿ ಅಸ್ಪದವಿಲ್ಲ.

ಊ) ಬೆರಳಚ್ಚುಗಾರರು - 1116

ಶೀಪ್ರಲಿಪಿಗಾರರು - 422

ಬೆರಳಚ್ಚು ನಿರುದ್ಯೋಗಿಗಳ ಬಗ್ಗೆ ಮಾಹಿತಿ ಸದ್ಯ ಲಭ್ಯವಿಲ್ಲ.

ರಾಜ್ಯದಲ್ಲಿ ಜನತಾ ದರ್ಶನ ಕಾರ್ಯಕ್ರಮ

1953 - ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದಲ್ಲಿ ಈವರೆಗೆ ಜನತಾ ದರ್ಶನದ ಕಾರ್ಯಕ್ರಮ ನಡೆದ ಸ್ಥಳಗಳು ಯಾವುವು? (ದಿನಾಂಕ ಸಹಿತ ತಿಳಿಸುವುದು)*

ಆ) *ಜನತಾ ದರ್ಶನದಲ್ಲಿ ಸಾರ್ವಜನಿಕರಿಂದ ಬಂದ ಅಹವಾಲುಗಳು ಎಷ್ಟು ಯಾವ-ಯಾವ ಸ್ವರೂಪದ ಸಮಸ್ಯೆಗಳ ಅರ್ಜಿ ಬಂದಿವೆ ಈ ಅರ್ಜಿಗಳು ಯಾವ-ಯಾವ ಇಲಾಖೆಗೆ ಸಂಬಂಧಿಸಿದವುಗಳಾಗಿವೆ. (ಈ ಮಾಹಿತಿಯನ್ನು ಜಿಲ್ಲಾವಾರು ವಿವರವಾಗಿ ತಿಳಿಸುವುದು) (ಶಿವಮೊಗ್ಗ ಜಿಲ್ಲೆಯ ಮಾಹಿತಿಯನ್ನು ತಾಲ್ಲೂಕುವಾರು ನೀಡುವುದು)*

ಇ) *ಈ ರೀತಿ ಸಲ್ಲಿಸಲಾದ ಅರ್ಜಿಗಳಲ್ಲಿ ಇತ್ಯರ್ಥವಾದ ಅರ್ಜಿಗಳು ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)*

ಈ) *ಜನತಾ ದರ್ಶನದ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚ ಎಷ್ಟು (ಜಿಲ್ಲಾವಾರು ಮಾಹಿತಿ ತಿಳಿಸುವುದು)*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ)

ಸ್ಥಳ	ದಿನಾಂಕ
ಮೈಸೂರು	4-7-95
ಕೊಡಗು	5-7-95

ಹಾಸನ	7-7-95
ಚಿಕ್ಕಮಗಳೂರು	11-7-95
ಶಿವಮೊಗ್ಗ	12-7-95
ಚಿತ್ರದುರ್ಗ	13-7-95
ತುಮಕೂರು	14-7-95
ಬಿಜಾಪುರ	17-7-95
ಗುಲ್ಬರ್ಗಾ	18-7-95
ಬೀದರ್	19-7-95
ಬೆಳಗಾಂ	31-7-95
ಧಾರವಾಡ	2-8-95
ರಾಯಚೂರು	3-8-95
ಬಳ್ಳಾರಿ	4-8-95
ಕೋಲಾರ	11-8-95
ಮಂಡ್ಯ	14-8-95

ಅ) 18,932

ಜಮೀನು ವಿವಾದ, ಉದ್ಯೋಗ, ಆರ್ಥಿಕ ಸಹಾಯ ಅನುಕಂಪದ ಆಧಾರದ ಮೇಲೆ ನೇಮಕಾತಿ, ವರ್ಗಾವಣೆ, ಅಂಗವಿಕಲರ ಸಮಸ್ಯೆಗಳು, ಬಾವಿ ಸಾಲ ಮನ್ನಾ, ಜಮೀನು ಮಂಜೂರಾತಿ, ವೃದ್ಧಾಪ್ಯ ವೇತನ ವಿಧವಾ ವೇತನ, ರಾಜಕೀಯ ಸಂತ್ರಸ್ಥರ ಬೇಡಿಕೆಗಳು ಕಲಾವಿದರ ಬೇಡಿಕೆಗಳು, ಪೋಲೀಸ್ ರಕ್ಷಣೆ, ಮನೆ ನಿವೇಶನಗಳ ಹಂಚಿಕೆಯ ಬಗ್ಗೆ, ಪೌರ ಸೌಕರ್ಯಗಳು ಮತ್ತಿತರೆ ಅರ್ಜಿಗಳು ಬಂದಿವೆ ಸಾಮಾನ್ಯವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕೆಲವು ಜಿಲ್ಲೆಗಳನ್ನು ಹೊರತುಪಡಿಸಿ ಸರ್ಕಾರದ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಶಿವಮೊಗ್ಗ ಜಿಲ್ಲೆಯ ತಾಲ್ಲೂಕು ಕೂಡ ಇದರಿಂದ ಹೊರತಲ್ಲ.

ಇ) ಜಿಲ್ಲಾಧಿಕಾರಿಗಳಿಂದ ವರದಿ ಕೇಳಲಾಗಿದೆ.

ಈ) ವಿವರಗಳ ಪಟ್ಟಿಯನ್ನು ಲಗತ್ತಿಸಿದೆ.

List of expenditure incurred during Janatha Darshan Programme

ಕ್ರ.ಸಂ.	ಜಿಲ್ಲೆಗಳು	ತಗುಲಿದ ವೆಚ್ಚ
1.	ಮೈಸೂರು	68,000-00
2.	ಮಡಿಕೇರಿ	-ಇಲ್ಲ-
3.	ಹಾಸನ	13,000-00
4.	ಚಿಕ್ಕಮಗಳೂರು	14,500-00

5.	ಶಿವಮೊಗ್ಗ	22,090-00
6.	ಚಿತ್ರದುರ್ಗ	14,800-00
7.	ತುಮಕೂರು	11,400-00
8.	ಬಿಜಾಪುರ	15,000-00
9.	ಗುಲ್ಬರ್ಗಾ	40,000-00
10.	ಬೆಳಗಾಂ	16,000-00
11.	ಧಾರವಾಡ	16,000-00
12.	ರಾಯಚೂರು	26,800-00
13.	ಬೀದರ್	40,000-00
14.	ಬಳ್ಳಾರಿ	15,000-00
15.	ಮಂಡ್ಯ	70,000-00
16.	ಕೋಲಾರ	45,000-00
	ರೂ.	4,27,590-00

ಹುಬ್ಬಳ್ಳಿ ಸೆಂಟ್ರಲ್ ಬಸ್‌ಸ್ಟ್ಯಾಂಡ್‌ನಲ್ಲಿ ಬಾಂಬ್ ಸ್ಫೋಟ

2237 - ಶ್ರೀ ಅಶೋಕ ಕಾಟ್ವೆ (ಹುಬ್ಬಳ್ಳಿ ನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ಸೆಂಟ್ರಲ್ ಬಸ್‌ಸ್ಟ್ಯಾಂಡ್‌ನಲ್ಲಿ ಕಳೆದ ಕೆಲವು ದಿನಗಳ ಹಿಂದೆ ಹುಬ್ಬಳ್ಳಿ - ಧಾರವಾಡ ನಡುವೆ ಸಂಚರಿಸುವ ಬಸ್ ಹುಬ್ಬಳ್ಳಿ ಬಸ್ ಸ್ಟ್ಯಾಂಡ್‌ಗೆ ಬಂದಾಗ ಬಸ್ಸಿನಲ್ಲಿ ಬಾಂಬ್ ಸ್ಫೋಟವಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಾಂಬ್ ಸ್ಫೋಟ ಮಾಡಿದ ಆಪರಾಧಿಗಳನ್ನು ಬಂಧಿಸಲಾಗಿದೆಯೆ, ಹಾಗಿದ್ದಲ್ಲಿ ಅವರ ತನಿಖೆ ಯಾವ ಹಂತಕ್ಕೆ ಬಂದಿದೆ ಮತ್ತು ಇದರ ಹಿನ್ನೆಲೆಯಲ್ಲಿ ಯಾರನ್ನಾದರೂ ಬಂಧಿಸಲು ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಇನ್ನೂ ಯಾರನ್ನೂ ಬಂಧಿಸಿರುವುದಿಲ್ಲ. ಈ ಪ್ರಕರಣದ ತನಿಖೆಯನ್ನು (ಸಿ.ಸಿ.ಬಿ) ಸಿಟಿ ಕ್ರೈಂ ಬ್ರಾಂಚ್‌ರವರು ತೆಗೆದುಕೊಂಡಿದ್ದು ತನಿಖೆ ಮುಂದುವರೆದಿದೆ.

ಹುಬ್ಬಳ್ಳಿ ಧಾರವಾಡದಲ್ಲಿ ನಡೆದ ದರೋಡೆ ಹಾಗೂ ಕೊಲೆಗಳ ಸಂಖ್ಯೆ

2150 - ಶ್ರೀ ಅಶೋಕ ಕಾಟ್ವೆ (ಹುಬ್ಬಳ್ಳಿ - ನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಒಂದು ವರ್ಷದಿಂದ ಹುಬ್ಬಳ್ಳಿ - ಧಾರವಾಡದಲ್ಲಿ ಎಷ್ಟು ದರೋಡೆ ಹಾಗೂ ಕೊಲೆಗಳು ನಡೆದಿವೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಪೊಲೀಸ್ ಇಲಾಖೆಯ ನಿಷ್ಕಾಳಜಿಯ ಬಗ್ಗೆ ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :